| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ.746/2014 | | | |
| ಸಾಕ್ಷಿದಾರರ ಹೆಸರು | ಆಂಜಿನಪ್ಪ ಎಂ | | |
| ತಂದೆಃ ಹೆಸರು | ಮುನಿನಾಗಪ್ಪ | ಪಿಡಬ್ಲ್ಯೂಃ | 1 |
| ವಯಸ್ಸು | 68 ವರ್ಷ | ಸಿಡಬ್ಲ್ಯೂಃ | 1 |
| ಉದ್ಯೋಗ | ನಿವೃತ್ತ ಅಸಿಸ್ಟೆಂಟ್ ಜನರ್ ಮ್ಯಾನೇಜರ್ | ಪ್ರಮಾಣ ವಚನ | |
| ವಾಸ ಸ್ಥಳ | ಕೋಲಾರ | ಭೋದಿಸಿದ ದಿನಾಂಕ | 14-12-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

1982 ರಿಂದ 2016 ಜೂನ್ ವರೆಗೆ ಎ ಜಿ ಎಂ ಆಗಿ ಕರ್ನಾಟಕ ರಾಜ್ಯ ಭೀಜ ನಿಗಮ ನಿಯಮಿತದಲ್ಲಿ ಕೆಲಸ ಮಾಡಿರುತ್ತೇನೆ.

2011 ಜನವರಿಯಲ್ಲಿ ನಾನು ಚಿಂತಾಮಣಿಯ ಕರ್ನಾಟಕ ರಾಜ್ಯ ಭೀಜ ನಿಗಮ ನಿಯಮಿತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ನಾನು ಬರುವುದಕ್ಕಿಂತ ಪೂರ್ವದಲ್ಲಿ ವೆಂಕಟೇಶ್ ಎಂಬ ವ್ಯಕ್ತಿಯು ಕ್ಯಾಷಿಯರ್ ಮತ್ತು ಮಾರಾಟ ಗುಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದು ಆ ಸಮಯದಲ್ಲಿ ನನ್ನ ಜಾಗದಲ್ಲಿ ಬಿ. ಕೆಂಪಣ್ಣ ಮತ್ತು ದೇವರಾಜ್ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದು , 2006 ರಿಂದ 2010 ಡಿಸೆಂಬರ್ ವರೆಗೆ 1 ಕೋಟಿ 5 ಲಕ್ಷ ರೂಗಳನ್ನು ವೆಂಕಟೇಶ್ ರವರು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತ ಆಡಿಟ್ ನವರು ತಿಳಿಸಿರುತ್ತಾರೆ ಈ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯ ಕಛೇರಿಯವರು ದೂರನ್ನು ದಾಖಲಿಸುವಂತೆ ತಿಳಿಸಿದ್ದು ಆ ಪ್ರಕಾರ ನಾನು ದೂರು ದಾಖಲು ಮಾಡಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ.3773/2021 | | | |
| ಸಾಕ್ಷಿದಾರರ ಹೆಸರು | ಬೈರೆಡ್ಡಿ | | |
| ತಂದೆಃ ಹೆಸರು | ವೆಂಕಟಪ್ಪ | ಪಿಡಬ್ಲ್ಯೂಃ | 2 |
| ವಯಸ್ಸು | 48 ವರ್ಷ | ಸಿಡಬ್ಲ್ಯೂಃ | 2 |
| ಉದ್ಯೋಗ | ಅಂಗಡಿ ವ್ಯಾಪಾರ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 14-12-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಕರ್ನಾಟಕ ರಾಜ್ಯ ಭೀಜ ನಿಗಮ ನಿಯಮಿತ ಕಛೇರಿ ಮುಂದೆ ಜೇನ್ಸ್ ಎಂಬ ಪ್ಯಾನ್ಸಿ ಸ್ಟೋರ್ ಇಟ್ಟುಕೊಂಡಿದ್ದು, ವೆಂಕಟೇಶ್ ಎನ್ನುವವರು ನಮ್ಮ ಅಂಗಡಿಯಲ್ಲಿ ಆಗಾಗ ಬಂದು ಕಛೇರಿಗೆ ಬೇಕಾದ ಪೆನ್ನು ಪೇಪರ್ ಗಳನ್ನು ಖರೀದಿ ಮಾಡುತ್ತಾ ಪರಿಚಯ ಆಗಿರುತ್ತದೆ. ವಸ್ತುಗಳು ಖರೀದಿ ಮಾಡಿ ನನಗೆ ಹಣ ಕೊಡುತ್ತಿದ್ದು, ಹಣ ಪಡೆದುಕೊಳ್ಳುತ್ತಿದ್ದೆ. ಈ ರೀತಿ ಇರುವಾಗ ಒಂದು ದಿನ ಕಛೇರಿಗೆ ಹೋಗಿ ಖರೀದಿ ಮಾಡಿದ ವಸ್ತುಗಳಿಗೆ ಹಣವನ್ನು ಕೇಳಲು ಅವರ ಕಛೇರಿಗೆ ಹೋದಾಗ ವೆಂಕಟೇಶ್ ರವರು ಬಿಜಿಯಾಗಿದ್ದು ನನಗೆ ಸ್ಟೇಟ್ ಬ್ಯಾಂಕ್ ಮೈಸೂರು ಖಾತೆಯ ಚೆಕ್ ಅನ್ನು ನೀಡಿದ್ದು, ಅದಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಗೆ ಹೋಗಿ ಹಣವನ್ನು ಡ್ರಾ ಮಾಡಿಕೊಂಡು ವೆಂಕಟೇಶ್ ರವರಿಗೆ ಕೊಡುತ್ತಿದ್ದೆ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ.3773/2021 | | | |
| ಸಾಕ್ಷಿದಾರರ ಹೆಸರು | ಶ್ರೀನಿವಾಸರೆಡ್ಡಿ | | |
| ತಂದೆಃ ಹೆಸರು | ಕೆಂಪರೆಡ್ಡಿ | ಪಿಡಬ್ಲ್ಯೂಃ | 2 |
| ವಯಸ್ಸು | 52 ವರ್ಷ | ಸಿಡಬ್ಲ್ಯೂಃ | 2 |
| ಉದ್ಯೋಗ | ಹೊರ ಗುತ್ತಿಗೆ ಆದಾರದ ಮೇಲೆ ಕೆಲಸ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 14-12-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನಾನು 7-8 ವರ್ಷಗಳಿಂದ ಕರ್ನಾಟಕ ರಾಜ್ಯ ಭೀಜ ನಿಗಮ ನಿಯಮಿತದಲ್ಲಿ ಹೊರಗುತ್ತಿದೆ ಆದಾರದಲ್ಲಿ ಕೆಲಸ ಮಾಡುತ್ತಿದ್ದೇನೆ.

ನಾನು 7-8 ವರ್ಷಗಳಿಂದ ಕರ್ನಾಟಕ ರಾಜ್ಯ ಭೀಜ ನಿಗಮ ನಿಯಮಿತದಲ್ಲಿ ಕೆಲಸ ಮಾಡುತ್ತಿದ್ದು ನಮ್ಮ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ವೆಂಕಟೇಶ್ ರವರೇ ಬ್ಯಾಂಕ್ ಗೆ ಹೋಗಿ ಹಣ ಢ್ರಾ ಮಾಡಿಕೊಂಡು ಬರುತ್ತಿದ್ದು, ಆ ದಿನ ನನಗೆ ಬ್ಯಾಂಕ್ ಗೆ ಹೋಗಲು ಆಗುತ್ತಿಲ್ಲ ನೀವು ಬ್ಯಾಂಕ್ ಗೆ ಹೋಗಿ ಹಣವನ್ನು ಢ್ರಾ ಮಾಡಿಕೊಂಡು ಬನ್ನಿ ಅಂತ ಎಸ್ ಬಿ ಎಂ ಖಾತೆಯ ಚೆಕ್ ಅನ್ನು ನೀಡಿರುತ್ತಾರೆ. ಬ್ಯಾಂಕ್ ನಲ್ಲಿ ತೆಗೆದುಕೊಂಡು ಹೋಗಿ ನನ್ನ ಸಹಿಯನ್ನು ಮಾಡಿ ಹಣ ಢ್ರಾ ಮಾಡಿಕೊಂಡು ಬಂದು ಹಣವನ್ನು ವೆಂಕಟೇಶ್ ರವರಿಗೆ ಕೊಟ್ಟಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.